RNU AIR DHARWAD

JUNE 13, 2024

AKASHAVANI - DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ವೈದ್ಯಕೀಯ ತ್ಯಾಜ್ಯದ, ವೈಜ್ಞಾನಿಕ ಸಾಗಣೆ ಹಾಗೂ ವಿಲೇವಾರಿಗೆ, ನೂತನ ನೀತಿ – ಈಶ್ವರ ಖಂಡ್ರೆ.
- ಕರಾವಳಿ ಭಾಗದ 3 ಜಿಲ್ಲೆಗಳಲ್ಲಿ, ಕಡಲ್ಕೊರೆತ ತಡೆಯಲು, ಅನುದಾನ ಬಿಡುಗಡೆಗೆ ತಾತ್ವಿಕ ಒಪ್ಪಿಗೆ – ಲಕ್ಷ್ಮೀ ಹೆಬ್ಬಾಳಕರ್.
- ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಾಳೆ, ಕಲ್ಯಾಣ ಕರ್ನಾಟಕ ಪ್ರದೇಶ, ಅಭಿವೃದ್ಧಿ ಮಂಡಳಿಯ, ಪ್ರಗತಿ ಪರಿಶೀಲನಾ ಸಭೆ – ಅಜಯ್ ಸಿಂಗ್.
- ವಿಶ್ವ, ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ, ಸಂಪನ್ನ.

<><><>

ಈಗ ವಾರ್ತೆಗಳ ವಿವರ

<><><>

ಅಪಾಯಕಾರಿ ವೈದ್ಯಕೀಯ ತ್ಯಾಜ್ಯದ, ವೈಜ್ಞಾನಿಕವಾಗಿ ಸಾಗಣೆ ಹಾಗೂ ವಿಲೇವಾರಿ ಅಗತ್ಯವಿದ್ದು, ತಜ್ಞರೊಂದಿಗೆ ಸಮಾಲೋಚಿಸಿ, ನೂತನ ಕರಡು ನೀತಿ ಸಿದ್ಧಪಡಿಸುವಂತೆ, ಸೂಚಿಸಿದ್ದಾಗಿ ಪರಿಸರ ಮತ್ತು ಜೀವಿಶಾಸ್ತ್ರ ಖಾತೆ ಸಚಿವ, ಈಶ್ವರ ಖಂಡ್ರೆ ಹೇಳಿದ್ದಾರೆ. ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮಿತವಾಗಿ ಪರಿಶೀಲಿಸಿ, ಸಂಬಂಧಿತ ಸ್ಥಳೀಯ ಸಂಸ್ಥೆಗಳ ವಿರುದ್ಧ, ಸೂಕ್ತ ಕಾನೂನು ಕ್ರಮ ದಾಖಲಿಸುವಂತೆ, ಸೂಚಿಸಿದ್ದಾಗಿ, ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ತಿಳಿಸಿದ್ದಾರೆ.

<><><>

ರಾಜ್ಯ ಸರ್ಕಾರ, ವೈದ್ಯರುಗಳನ್ನು ಗುತ್ತಿಗೆ ಆಧಾರದಲ್ಲಿ, ನೇಮಕ ಮಾಡಿಕೊಳ್ಳಲು ಸಿದ್ಧವಿದೆ. ನೇಮಕಗೊಂಡ ವೈದ್ಯರು, ದೂರದ ಚಿಕ್ಕ ಪುಟ್ಟ ನಗರ, ಪಟ್ಟಣಗಳಲ್ಲಿ ಕರ್ತವ್ಯ ನಿರ್ವಹಿಸಲು, ಮನಸ್ಸು ಮಾಡಬೇಕು ಎಂದು, ಉನ್ನತ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಎಂ.ಸಿ.ಸುಧಾಕರ್ ವೈದ್ಯಕೀಯ ವಿದ್ಯಾರ್ಥಿಗಳನ್ನು ಕೋರಿದ್ದಾರೆ. ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕಿನ, ಬಿ.ಜಿ.ನಗರದ ಆದಿಚುಂಚನಗಿರಿ ವಿಶ್ವವಿದ್ಯಾಲಯದ 4ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

<><><>

ಉತ್ತರಕನ್ನಡ ಜಿಲ್ಲೆ ಸೇರಿದಂತೆ, ಕಡಲ್ಕೊರೆತದಿಂದ ಹಾನಿಯಾದ ಕರಾವಳಿ ಭಾಗದ, 3 ಜಿಲ್ಲೆಗಳಲ್ಲಿ, ತುರ್ತು ಕಾಮಗಾರಿಗೆ, 5 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಲು, ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂದು, ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ. ಮಣಿಪಾಲದ ಜಿಲ್ಲಾಧಿಕಾರಿ ಕಚೇರಿಯಲ್ಲಿ, ಸಭೆ ನಡೆಸಿದ ಅವರು, ಮುಂಗಾರು ಮಳೆ ಹಿನ್ನೆಲೆ, ಉಡುಪಿ ಜಿಲ್ಲೆಯಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಂತೆ, ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

<><><>

ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲು, ರಾಜ್ಯ ಸರ್ಕಾರ ಹಸಿರು ಧ್ವಜ ತೋರಿದ್ದು, ರಾಜ್ಯದ 7 ಜಿಲ್ಲೆಗಳಲ್ಲಿ ಒಟ್ಟು, ಸಾವಿರದ 8 ಪೂರ್ವ ಪ್ರಾಥಮಿಕ ಶಾಲೆಗಳನ್ನು, ಪ್ರಸಕ್ತ ವರ್ಷದಿಂದಲೇ ಆರಂಭಿಸಲು ಆದೇಶ ಹೊರಡಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿ 119 ಶಾಲೆಗಳು, ಬೀದರ್ 98, ಕೊಪ್ಪಳ 131, ಕಲಬುರಗಿ 234, ರಾಯಚೂರು 190, ವಿಜಯನಗರ 142 ಹಾಗೂ ಯಾದಗಿರಿಯಲ್ಲಿ 94 ಶಾಲೆಗಳು ಆರಂಭಗೊಳ್ಳಲಿವೆ ಎಂದು, ವಾರ್ತಾ ಇಲಾಖೆ ತಿಳಿಸಿದೆ.

<><><>

ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ, ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ, ಪ್ರಥಮ ವರ್ಷದ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳಿಗೆ, ಇಪ್ಪತ್ತು ವಿದ್ಯಾರ್ಥಿಗಳ ಹೆಚ್ಚುವರಿ ಪ್ರವೇಶಾತಿಗೆ, ಅನುಮತಿ ನೀಡಿ, ಆದೇಶಿಸಲಾಗಿದೆ ಎಂದು, ವಿಧಾನ ಪರಿಷತ್ ಸದಸ್ಯ ಎಸ್.ವ್ಹಿ. ಸಂಕನೂರ ತಿಳಿಸಿದ್ದಾರೆ.

<><><>

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಪ್ರೊಫೆಸರ್ ಎಮಿರಟಸ್ ಹಾಗೂ ಅಂತಾರಾಷ್ಟ್ರೀಯ ಖ್ಯಾತಿಯ, ಭೌತಿಕ ರಸಾಯನ ಶಾಸ್ತ್ರಜ್ಞ, ಪ್ರೊಫೆಸರ್ ಎಸ್.ಟಿ.ನಂದಿಬೇವೂರ ಅವರು, ವಿಶ್ವದ ಅಗ್ರಮಾನ್ಯ ವಿಜ್ಞಾನಿಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಸಂಶೋಧನೆ, ಅಂತಾರಾಷ್ಟ್ರೀಯ ನಿಯತ ಕಾಲಿಕೆಗಳಲ್ಲಿ ಅತಿ ಹೆಚ್ಚು ವೈಜ್ಞಾನಿಕ ಪ್ರಬಂಧಗಳ ಪ್ರಕಟಣೆ ಹಾಗೂ ಅಧ್ಯಾಪನಕ್ಕಾಗಿ, ಉತ್ಕೃಷ್ಟ ವಿಜ್ಞಾನಿ ಗೌರವಕ್ಕೆ ಅವರು ಪಾತ್ರರಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಪ್ರೊಫೆಸರ್ ಎಸ್.ಟಿ.ನಂದಿಬೇವೂರ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪ್ರೊಫೆಸರ್ ಎಸ್.ಟಿ.ನಂದಿಬೇವೂರ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಾಳೆ ಗೃಹ ಕಚೇರಿ ಕೃಷ್ಣದಲ್ಲಿ, ಕಲ್ಯಾಣ ಕರ್ನಾಟಕ ಪ್ರದೇಶ, ಅಭಿವೃದ್ಧಿ ಮಂಡಳಿಯ, ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು, ಮಂಡಳಿ ಅಧ್ಯಕ್ಷ ಡಾಕ್ಟರ್ ಅಜಯ್ ಸಿಂಗ್ ತಿಳಿಸಿದ್ದಾರೆ. ಕಲಬುರಗಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಪ್ರಸಕ್ತ ಸಾಲಿಗೆ 5 ಸಾವಿರ ಕೋಟಿ ರೂಪಾಯಿ, ಅನುದಾನ ಒದಗಿಸಿದ್ದು, ಯೋಜನಾ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಕಲ್ಯಾಣ ಕರ್ನಾಟಕ ವಿಭಾಗದ ಸಚಿವರನ್ನು ಸಹ ಸಭೆಗೆ ಆಹ್ವಾನಿಸಲಾಗಿದೆ ಎಂದರು. ಇದೇ 28 ರಂದು ಕಲಬುರಗಿಯಲ್ಲಿ ಮಂಡಳಿ ಸಭೆ ನಡೆಸಲು ನಿರ್ಧರಿಸಿದ್ದು, 15 ದಿನಗಳೊಳಗೆ ಕಲ್ಯಾಣ ಕರ್ನಾಟಕದ ಶಾಸಕರಿಂದ ಕ್ರಿಯಾ ಯೋಜನೆ ಪಡೆದು, ಕೆಲಸ ಆರಂಭಿಸಲಾಗುವುದು ಎಂದು ಹೇಳಿದರು.

<><><>

"ನಮ್ಮ ಬದ್ಧತೆ ಮೇಲೆ ಕಾರ್ಯನಿರ್ವಹಿಸೋಣ; ಬಾಲ ಕಾರ್ಮಿಕತೆಯನ್ನು ಕೊನೆಗೊಳಿಸೋಣ" ಎನ್ನುವುದು ಈ ಬಾರಿಯ, ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ, ಧ್ಯೇಯ ವಾಕ್ಯವಾಗಿತ್ತು.

ಬಾಲ ಹಾಗೂ ಕಿಶೋರ ಕಾರ್ಮಿಕ ಪಿಡುಗಿನ ನಿರ್ಮೂಲನೆಗೆ, ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದಂದು, ಪ್ರತಿಜ್ಞೆ ಸ್ವೀಕರಿಸಿದ್ದಾಗಿ ನಮ್ಮ ಜಿಲ್ಲಾವಾರು ಪ್ರತಿನಿಧಿಗಳು ವರದಿ ಮಾಡಿದ್ದಾರೆ.

ಆಯಾ ಜಿಲ್ಲಾವಾರು ಪ್ರಧಾನ ಜಿಲ್ಲಾ ನ್ಯಾಯಾಧೀಶರು, ಜನ ಜಾಗ್ರತಿ ಕಾರ್ಯಕ್ರಮ ಉದ್ಘಾಟಿಸಿ, ಜಾಥಾದಲ್ಲಿ ಪಾಲ್ಗೊಂಡು, ಸಾಮಾಜಿಕರ ಸಹಕಾರ ಅಗತ್ಯ ಎಂದು, ಪ್ರತಿಪಾದಿಸಿದರು.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು, ಕಡ್ಡಾಯವಾಗಿ ಶಾಲೆಗೆ ಸೇರುವಂತೆ, ಬಾಲ ಕಾರ್ಮಿಕ ಮಕ್ಕಳನ್ನು ಗುರುತಿಸಿ, ಅವರನ್ನು ಮುಖ್ಯವಾಹಿನಿಗೆ ತರಲು, ಸಾಮೂಹಿಕವಾಗಿ ಸಂಘಟಿತ ಪ್ರಯತ್ನ ಕೈಗೊಳ್ಳುವಂತೆ, ಜನ ಜಾಗ್ರತಿ ಜಾಥಾಗಳಲ್ಲಿ ಮನವಿ ಮಾಡಲಾಯಿತು. ಸ್ತಬ್ಧ ಚಿತ್ರಗಳು ಗಮನ ಸೆಳೆದವು.

ಜಿಲ್ಲಾವಾರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಅಥವಾ ಮಕ್ಕಳ ಸಹಾಯವಾಣಿ 1–0–9–8 ಅಥವಾ 1–1–2 ಕ್ಕೆ ಕರೆ ಮಾಡಿ ಮಾಹಿತಿ ನೀಡಿ, ಬಾಲ ಹಾಗೂ ಕಿಶೋರ ಕಾರ್ಮಿಕ ಮಕ್ಕಳ ರಕ್ಷಣೆ ಕಾರ್ಯದಲ್ಲಿ, ಕೈ ಜೋಡಿಸುವಂತೆ ಸಾರ್ವಜನಿಕರನ್ನು ಕೋರಲಾಯಿತು.

ಹುಬ್ಬಳ್ಳಿಯ ಉಣಕಲ್‌ನ, ಬಾಲಕರ ಸರ್ಕಾರಿ ಬಾಲ ಮಂದಿರಕ್ಕೆ, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಭೇಟಿ ನೀಡಿ, ಪರಿಶೀಲಿಸಿದರು.

<><><>

ಖ್ಯಾತ ಸರೋದ್ ಮಾಂತ್ರಿಕ, ಪಂಡಿತ್ ರಾಜೀವ್ ತಾರಾನಾಥ್ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ಸರ್ಕಾರಿ ಗೌರವದೊಂದಿಗೆ, ಚಾಮುಂಡಿ ಬೆಟ್ಟದ ತಪ್ಪಲಿನ ವಿದ್ಯುತ್ ಚಿತಾಗಾರದಲ್ಲಿ ಬುಧವಾರ ನೆರವೇರಿತು. ಇದಕ್ಕೂ ಮೊದಲು, ಕುವೆಂಪುನಗರದ ಪಂಚಮಂತ್ರ ರಸ್ತೆಯ ಅವರ ನಿವಾಸದಲ್ಲಿ, ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಚ್.ಸಿ. ಮಹದೇವಪ್ಪ, ಸಾಹಿತಿ ಚಂದ್ರಶೇಖರ ಕಂಬಾರ, ದೇವನೂರ ಮಹಾದೇವ, ಡಾಕ್ಟರ್ ರಹಮತ್ ತರೀಕೆರೆ, ಜಿಲ್ಲಾಧಿಕಾರಿ ಡಾಕ್ಟರ್ ಕೆ.ವಿ. ರಾಜೇಂದ್ರ, ಅಂತಿಮ ದರ್ಶನ ಪಡೆದರು.

<><><>

ಅಂತಾರಾಷ್ಟ್ರೀಯ ಖ್ಯಾತಿಯ ತಬಲಾ ಪಟು, ಪಂಡಿತ ರವೀಂದ್ರ ಯಾವಗಲ್, ಪ್ರದೇಶ ಸಮಾಚಾರಕ್ಕಾಗಿ, ಪಂಡಿತ ರಾಜೀವ ತಾರಾನಾಥ ಅವರೊಂದಿಗಿನ, ನಿಡುಗಾಲದ ಸಖ್ಯವನ್ನು, ಸ್ಮರಿಸಿದ್ದಾರೆ.

<><><>

ಪಂಡಿತ ರವೀಂದ್ರ ಯಾವಗಲ್ ಧ್ವನಿ 40 ಸೆಕೆಂದುಗಳು

<><><>

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ, ಕಾನೂನಿನಡಿ ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆಯಾಗಲಿದೆ ಎಂದು, ಗೃಹ ಖಾತೆ ಸಚಿವ ಡಾಕ್ಟರ್ ಜಿ.ಪರಮೇಶ್ವರ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಚಿತ್ರನಟ ದರ್ಶನ್ ಸೇರಿದಂತೆ, ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದ ಮೇಲೆ, 13 ಜನರನ್ನು ಪೊಲೀಸರು ಬಂಧಿಸಿ, ತನಿಖೆ ಕೈಗೊಂಡಿದ್ದಾರೆ ಎಂದರು. ರೇಣುಕಾಸ್ವಾಮಿ ಅವರ ಕುಟುಂಬಕ್ಕೆ ಪರಿಹಾರ ನೀಡುವ ಬಗ್ಗೆ, ಮುಖ್ಯಮಂತ್ರಿ ಅವರ ಜೊತೆ ಚರ್ಚಿಸಿ, ತೀರ್ಮಾನಿಸುವುದಾಗಿ ಪರಮೇಶ್ವರ ತಿಳಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮಡಿಕೇರಿಯ ವೀರ ಸೇನಾನಿ, ಜನರಲ್ ಕೆ.ಎಸ್.ತಿಮ್ಮಯ್ಯ ಸ್ಮಾರಕ ಭವನದ, ವಿವಿಧ ಅಭಿವೃದ್ಧಿ ಕಾರ್ಯಗಳಿಗೆ, ಚಾಲನೆ ನೀಡಿದ್ದಾಗಿ ಜಿಲ್ಲಾಧಿಕಾರಿ ವೆಂಕಟರಾಜ ಹೇಳಿದ್ದಾರೆ.

<><><>

ಕಲಬುರಗಿ ನಗರಕ್ಕೆ ಇಂದಿನಿಂದ ದಿನಾಂಕ 19ರ ವರೆಗೆ, ಏಳು ದಿನಗಳ ವರೆಗೆ, ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು, ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

<><><>

ಧಾರವಾಡ ತಾಲೂಕು ಚುಟುಕು ಸಾಹಿತ್ಯ ಪರಿ `ತ್, 8ನೇ ಸಮ್ಮೇಳನದ ಸರ್ವಾಧ್ಯಕ್ಷರಾಗಿ, ಸಾಹಿತಿ ಕೆ.ಎಚ್.ನಾಯಕ ಆಯ್ಕೆಯಾಗಿದ್ದಾರೆ.

<><><>

ಬೆಂಗಳೂರು ಕಬ್ಬನ್ ಪಾರ್ಕ್ ಹೊರತು ಪಡಿಸಿ, ನಗರದ ಎಲ್ಲ ಉದ್ಯಾನಗಳನ್ನು ಬೆಳಗ್ಗೆ 5 ಗಂಟೆಯಿಂದ ರಾತ್ರಿ 10ರ ವರೆಗೆ ತೆರೆಯಲು, ಸರ್ಕಾರ ಸೂಚಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ವೈದ್ಯಕೀಯ ತ್ಯಾಜ್ಯದ, ವೈಜ್ಞಾನಿಕ ಸಾಗಣೆ ಹಾಗೂ ವಿಲೇವಾರಿಗೆ, ನೂತನ ನೀತಿ – ಈಶ್ವರ ಖಂಡ್ರೆ.
- ಕರಾವಳಿ ಭಾಗದ 3 ಜಿಲ್ಲೆಗಳಲ್ಲಿ, ಕಡಲ್ಕೊರೆತ ತಡೆಯಲು, ಅನುದಾನ ಬಿಡುಗಡೆಗೆ ತಾತ್ವಿಕ ಒಪ್ಪಿಗೆ – ಲಕ್ಷ್ಮೀ ಹೆಬ್ಬಾಳಕರ್.
- ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಾಳೆ, ಕಲ್ಯಾಣ ಕರ್ನಾಟಕ ಪ್ರದೇಶ, ಅಭಿವೃದ್ಧಿ ಮಂಡಳಿಯ, ಪ್ರಗತಿ ಪರಿಶೀಲನಾ ಸಭೆ – ಅಜಯ್ ಸಿಂಗ್.

- ವಿಶ್ವ, ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ, ಸಂಪನ್ನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ